ದಿನಾಂಕ : 07.10.2024 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ :** ಅರ್ಜಿದಾರರ ಪರ **ಶ್ರೀ ಆರ್.ಬಿ.ವೈ. ವಕೀಲರಿಂದ,**

ನಾನು ಈ ಅರ್ಜಿಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು ಈ ಕೆಳಕಂಡಂತೆ ಗುರುತಿಸಲಾಯಿತು.

| | |
|---|---|
| ನಿಪಿ.25 | ನೂನ್ಯತೆ ಪ್ರಮಾಣ ಪತ್ರ |

**ಪಾಟೀ ಸವಾಲುಃ** 3 ನೇ ಎದುರುದಾರರ ಪರ **ಶ್ರೀ** ಬಿ.ವಿ.ಪಿ. **ವಕೀಲರಿಂದ,**

ಈ ತರಹ ಅರ್ಜಿಯನ್ನು ನಾನು ಬೇರೆ ನ್ಯಾಯಾಲಯದಲ್ಲಿ ಹಾಕಿರುವುದಿಲ್ಲ. ಮೋಟಾರ್ ಸೈಕಲ್ ನಂಬರ್. ಕೆಎ-34-ಎಕ್ಸ್-3448 ರ ಮಾಲೀಕ ನಾನು ಇರುತ್ತೇನೆ. ಸದರಿ ಮೋಟಾರ್ ಸೈಕಲ್ ಗೆ ವಿಮೆ ಇಲ್ಲ. ಸದರಿ ಮೋಟಾರ್ ಸೈಕಲ್ ಗೆ ಚಾಲನೆ ಪರವಾನಿಗೆ ಪತ್ರ ಇರುತ್ತದೆ . ಅಪಘಾತ ಸಮಯದಲ್ಲಿ ಚಾಲನೆ ಪರವಾನಿಗೆ ಪತ್ರ ಚಾಲ್ತಿಯಲ್ಲಿ ಇರಲಿಲ್ಲ. ನನಗೆ ಮೋಟಾರ್ ಸೈಕಲ್ ಚಾಲನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ. ಇನೋವಾ ವಾಹನ ಚಾಲಕರ ತಪ್ಪಿನಿಂದ ಅಪಘಾತ ಆಗಿದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ದೂರು ಕೊಟ್ಟಿದ್ದ ಧನುಂಜಯ ನನ್ನ ಮಗ ಇರುತ್ತಾನೆ. ಅಪಘಾತ ಸಮಯದಲ್ಲಿ ಸದರಿ ಧನುಂಜಯ ನನ್ನ ಜೊತೆಗೆ ಇರಲಿಲ್ಲ. ಅಪಘಾತ ಆಗಿರುವುದು ದಿನಾಂಕಃ 12.10.2021 ರಂದು ನನ್ನ ಮಗ ದೂರು ಕೊಟ್ಟಿದ್ದು ದಿನಾಂಕಃ 19.10.2021 ರಂದು ಎಂದರೆ ಸರಿ. ಅಪಘಾತ ಸಮಯದಲ್ಲಿ

ಮೋಟಾರ್ ಸೈಕಲ್ ಅನ್ನು ನಾನು ವೇಗವಾಗಿ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನೇ ವೇಗವಾಗಿ ಚಲಾಯಿಸಿಕೊಂಡು ಬಂದು ಸ್ಕಿಡ್ ಆಗಿ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ಇನೋವಾ ಕಾರ್ ನನ್ನ ಮೋಟಾರ್ ಸೈಕಲ್ ಗೆ ಬಂದು ಡಿಕ್ಕಿ ಹೊಡೆದಿಲ್ಲ ಎಂದರೆ ಸರಿಯಲ್ಲ. ಪರಿಹಾರಗೊಸ್ಕರ ನನ್ನ ಮಗನಿಂದ ಸುಳ್ಳು ದೂರನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದೂರು ಕೊಡಲು ನನ್ನ ಮಗ ವಿಳಂಬವಾಗಿ ದೂರನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಕುರಿತು ಪರಿಹಾರ ಸಿಗಲಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮೋಟಾರ್ ಸೈಕಲ್ ಗೆ ಯಾವುದೇ ಜಖಂ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿಮ್ಸ್ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ ನಾರಾಯಣ ಸ್ಪರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಖರ್ಚಿಗಾಗಿ ನಾನು 1 ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ಸುಳ್ಳಾಗಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.9 ರಿಂದ 23 ಈ ಕೇಸ್‌ಗಾಗಿ ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಗಾಯಗಳು ಎಲ್ಲಾ ಗುಣಮುಖವಾಗಿದ್ದು ಡಿಸ್ಚಾರ್ಜ್ ಆಗಿ ಈಗ ಆರೋಗ್ಯವಾಗಿ ಇರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಪೂರ್ವದಲ್ಲಿ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೆ ಆ ರೀತಿಯಲ್ಲಿಯೇ ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.25 ಈ ಕೇಸ್ ಗಾಗಿ ಸೃಷ್ಟಿ ಮಾಡಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯದಾರ ಶ್ರೀನಿವಾಸ್ ರವರು ಹೇಳಿದಂತಹ ಯಾವುದೇ ತೊಂದರೆ

ಮತ್ತು ನ್ಯೂನ್ಯತೆಗಳು ನನಗೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ 65 ವರ್ಷ ಮೇಲ್ಪಟ್ಟಿದ್ದು ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂಬರ್22 ಡಿ ಮತ್ತು ಇ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನೇ ಬಿದ್ದು ಗಾಯ ಮಾಡಿಕೊಂಡ ಕಾರಣ 3 ನೇ ಎದುರುದಾರರ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ,

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2** ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ